ಅ) ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ :

	ಜಿಲ್ಲಾ	ಹಂಚಿಕೆಯಾದ ಮಳಿಗೆಗಳು
1)	ಬೆಂಗಳೂರು-ಗ್ರಾಮಾಂತರ	96
2)	ಕೋಲಾರ	4
3)	ತುಮಕೂರು	1
4)	ಹಾವೇರಿ	4
5)	ಉತ್ತರ ಕನ್ನಡ	4
6)	ಗುಲ್ಬರ್ಗಾ	4
7)	ಬೀದರ್	3
8)	ಬಿಜಾಪುರ	4
9)	ಬಾಗಲಕೋಟೆ	2
10)	ಮೈಸೂರು	3
11)	ಮಂಡ್ಯ	2
12)	ಶಿವಮೊಗ್ಗ	2
13)	ದಕ್ಷಿಣ ಕನ್ನಡ	2
	ಒಟ್ಟು	**131**

ಆ) ಹೌದು.

ತುಂಗಾಭದ್ರಾ ನದಿಯಿಂದ ಕುಡಿಯುವ ನೀರು ತರುವ ಯೋಜನೆ

4759 - ಶ್ರೀ ಕೋಳಿವಾಡ್ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ಹಾಗೂ ಬ್ಯಾಡಗಿ ನಗರ ಪ್ರದೇಶಗಳಿಗೆ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕು ಮುದೆನೂರು ಗ್ರಾಮದಲ್ಲಿರುವ ತುಂಗಭದ್ರಾ ನದಿಯಿಂದ ಕುಡಿಯುವ ನೀರು ತರುವ ಯೋಜನೆಯು ಹಂತದಲ್ಲಿದೆ?

ಆ) ಈ ಯೋಜನೆ ಮಂಜೂರಾದಾಗ ತಗುಲಿದ ಯೋಜನೆಯ ವೆಚ್ಚ ಎಷ್ಟು?

ಇ) ಈಗ ತಗಲುವ ವೆಚ್ಚ ಎಷ್ಟು?

ಈ) ಸದರಿ ಯೋಜನೆಯನ್ನು ಇನ್ನೂ ಎಷ್ಟು ತಿಂಗಳುಗಳಲ್ಲಿ ಮುಗಿಸಿ ನಾಗರೀಕರಿಗೆ ಕುಡಿಯುವ ನೀರು ಒದಗಿಸುವ ವ್ಯವಸ್ಥೆ ಮಾಡಲಾಗುವುದು ?

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ರಾಣೆಬೆನ್ನೂರು ಪಟ್ಟಣದ ಒಟ್ಟು 18.70 ಕಿ.ಮಿ. ಉದ್ದದ ಮುಖ್ಯ ಕೊಳವೆ ಮಾರ್ಗದಲ್ಲಿ 9.70 ಕಿ.ಮಿ. ಹಾಕಬೇಕಿದ್ದು ಹಾಗೂ ಪೀಡರ್ ಮೈನ್ ಕಾಮಗಾರಿಯು ಮುಕ್ತಾಯದ ಹಂತದಲ್ಲಿದ್ದು ಇನ್ನುಳಿದ ಯೋಜನೆಯ ಎಲ್ಲಾ ಕಾಮಗಾರಿಗಳು ಮುಗಿದಿರುತ್ತದೆ.

ಬ್ಯಾಡಗಿ ಪಟ್ಟಣದ ಒಟ್ಟು 14.34 ಕಿ.ಮಿ. ಕೊಳವೆ ಮಾರ್ಗದಲ್ಲಿ 4.80 ಕಿ.ಮಿ. ಕೊಳವೆಗಳು ಸರಬರಾಜಾಗಿದ್ದು 2.5 ಕಿ.ಮಿ. ಹಾಕಲಾಗಿದೆ.

ಇನ್ನೂಳಿದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತದೆ.

ಆ) ಅನುಮೋದನೆಯಾಗಿರುವ ಯೋಜನೆಯ ವೆಚ್ಚ ರೂ. 450.00 ಲಕ್ಷಗಳು.

ಇ) ಸದರಿ ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚ ರೂ. 1880.00 ಲಕ್ಷಗಳು.

ಈ) ಸದರಿ ಯೋಜನೆಯನ್ನು ಇನ್ನು 6 ತಿಂಗಳುಗಳಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ನೀರೊದಗಿಸಲು ಯೋಜಿಸಲಾಗಿದೆ.

ಸಂಕೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ ಹಿಂದುಳಿದ ಮತ್ತು ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳ ಕಟ್ಟಡ

4760 - ಶ್ರೀ ಕೋಳಿವಾಡ್ ಕೃಷ್ಣಪ್ಪ ಬೀಮಪ್ಪ (ರಾಣೆಬೆನ್ನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಕೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ವಿದ್ಯಾರ್ಥಿ ನಿಲಯಗಳಿವೆ? ಅವು ಎಷ್ಟಿವೆ? ಮತ್ತು ಯಾವ ಸಾಲಿನಿಂದ ಪ್ರಾರಂಭಿಸಲಾಯಿತು?

ಆ) 10 ವರ್ಷದ ಹಿಂದೆ ಸಂಕೇಶ್ವರದಲ್ಲಿ ಮಂಜೂರಾದ ವಿದ್ಯಾರ್ಥಿನಿಲಯ ಕಟ್ಟಡಗಳ ಕೆಲಸ ಪೂರ್ಣವಾಗದಿರಲು ಕಾರಣವೇನು?

ಇ) ವಿದ್ಯಾರ್ಥಿನಿಲಯಕ್ಕೆ ಮಂಜೂರಾದ ಹಣವನ್ನು ಬೇಗ ಖಾಸಗಿ ಸಂಸ್ಥೆಗಳಿಗೆ ವರ್ಗಾಯಿಸಲು ಕಾರಣವೇನು?

ಈ) ರಾಜ್ಯದಲ್ಲಿ ಸರ್ಕಾರಿ ಹೈಸ್ಕೂಲು ಹಾಗೂ ಸುಸ್ಸಜ್ಜಿತ ಖಾಸಗಿ ಹೈಸ್ಕೂಲುಗಳಿರುವುದರಿಂದ ಹೊಸ ವಿದ್ಯಾರ್ಥಿನಿಲಯಗಳನ್ನು ಕಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಉ) ಈ ವಿದ್ಯಾರ್ಥಿನಿಲಯ ಕಟ್ಟಲು ನಿಗದಿಪಡಿಸಿರುವ ಸ್ಥಳ ಸರ್ಕಾರದ ಗಮನಕ್ಕೆ ಬಂದಿದೆಯೆ?